# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಣ್ಣ ಪಿಪಿಪಿ ಯೋಜನೆಗಳ (ಸಾಮಾಜಿಕ ವಲಯದ ಯೋಜನೆಗಳನ್ನು ಒಳಗೊಂಡಂತೆ) ಅನುಷ್ಠಾನಕ್ಕೆ ಸಮಾಲೋಚಕ ಸಲಹೆಗಾರರನ್ನು (TA) ಆಯ್ಕೆ ಮಾಡಲು ಟೆಕ್ಸಾಕ್ ಸಂಸ್ಥೆಗೆ ಸಮಾಲೋಚಕ ಸೇವಾ ಶುಲ್ಕದ ಮುಂಗಡ ಮೊತ್ತ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಅಧಿಸೂಚನೆ ಸಂ. ಐಡಿಡಿ 1 ಐಟಿಎಸ್ 2019 ದಿನಾಂಕ 10.10.2019
2. ಸರ್ಕಾರದ ಅಪರ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆರವರ ಅಧ್ಯಕ್ಷತೆಯಲ್ಲಿ ದಿನಾಂಕ 08.10.2021 ರಂದು ನಡೆದ ಸಭೆಯ ನಡವಳಿಗಳು
3. ನಿರ್ದೇಶಕರು (ಪಿಪಿಪಿ ಕೋಶ) ರವರ ಪತ್ರ ಸಂಖ್ಯೆ. ಐಡಿಡಿ 39 ಐಟಿಎಸ್ 2020 ದಿನಾಂಕ 16.11.2021
4. ಟೆಕ್ಸಾಕ್‌ರವರ ಪತ್ರ ಸಂಖ್ಯೆ: TECSOK/CA/MSB/IDD/2021/268 ದಿನಾಂಕ 23.11.2021, ಪತ್ರ ಸಮ ಸಂಖ್ಯೆ 310 ದಿನಾಂಕ 13.12.2021 ಹಾಗೂ ಇಮೇಲ್ ದಿನಾಂಕ 18.12.2021
5. ನಿರ್ದೇಶಕರು (ಪಿಪಿಪಿ ಕೋಶ)ರವರ ಪತ್ರ ಸಂಖ್ಯೆ. ಐಡಿಡಿ 120 ಐಟಿಎಸ್ 2021 ದಿನಾಂಕ 20.12.2021

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಅಧಿಸೂಚನೆಯಲ್ಲಿ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವತಿಯಿಂದ ಗುರುತಿಸಲಾದ 14 ವಲಯಗಳ ಪಿಪಿಪಿ ಯೋಜನೆಗಳಿಗೆ ಅಗತ್ಯವಾದ ಸಮಾಲೋಚಕ ಸೇವೆಗಾಗಿ ಯೋಜನಾ ವೆಚ್ಚ ರೂ.500 ಕೋಟಿಗಳವರೆವಿಗೂ ಹಾಗೂ ರೂ.500 ಕೋಟಿಗಳಿಗೆ ಮೇಲ್ಪಟ್ಟ ಬಂಡವಾಳ ವೆಚ್ಚವನ್ನಾಗಿ ವಿಭಜಿಸಿ ಎರಡು ಪಟ್ಟಿಗಳನ್ನಾಗಿ ಸಮಾಲೋಚಕ ಸಲಹೆಗಾರರುಗಳನ್ನು ಆಯ್ಕೆಮಾಡಿ Empanel ಮಾಡಲಾಗಿರುತ್ತದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸಭೆಯಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ Empanelled ಸಲಹೆಗಾರರುಗಳು ದೊಡ್ಡ ವಹಿವಾಟು ನಡೆಸುವ ಸಂಸ್ಥೆಗಳಾಗಿದ್ದು, ಸಾಮಾಜಿಕ ವಲಯದ ಯೋಜನೆಗಳ ಕುರಿತು ಆಡಳಿತ ಇಲಾಖೆಗಳಿಂದ ಗುರುತಿಸಲಾಗುತ್ತಿರುವ ಕಡಿಮೆ ಬಂಡವಾಳ ವೆಚ್ಚವಿರುವಂತಹ ಯೋಜನೆಗಳಲ್ಲಿ ಪಾಲ್ಗೊಳ್ಳಲು ಆಸಕ್ತಿ ತೋರಿಸುತ್ತಿಲ್ಲದ ಕಾರಣ ಸಣ್ಣ ಬಂಡವಾಳ ವೆಚ್ಚವಿರುವ ಯೋಜನೆಗಳಿಗೋಸ್ಕರವಾಗಿ ಮತ್ತೊಂದು ಸಮಾಲೋಚಕ ಸಲಹೆಗಾರರುಗಳ Empanel ಮಾಡಲು ನಿರ್ಧರಿಸಿ, ಸಣ್ಣ ಪಿಪಿಪಿ ಯೋಜನೆಗಳ ಬಂಡವಾಳ ವೆಚ್ಚ ರೂ.100 ಕೋಟಿವರೆವಿಗೂ ಹಾಗೂ ರೂ.101 ರಿಂದ 200 ಕೋಟಿಗಳವರೆವಿಗೆ ಇರುವಂತಹ ವಲಯ ರಹಿತ ಎರಡು ಪ್ರತ್ಯೇಕವಾದ ಸಮಾಲೋಚಕ ಸಲಹೆಗಾರರುಗಳನ್ನು Empanel ಮಾಡಲು ಅಗತ್ಯವಿರುವ RFP ತಯಾರಿಸಿ ಸಲ್ಲಿಸಲು ಕ್ರಮ ವಹಿಸುವಂತೆ TECSOK ಸಂಸ್ಥೆಗೆ ಸಭೆಯಲ್ಲಿ ಸೂಚಿಸಲಾಯಿತು.

3. ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಸಭೆಯ ಸೂಚನೆಯಂತೆ ಸಮಾಲೋಚಕ ಸಲಹೆಗಾರರುಗಳನ್ನು ಆಯ್ಕೆ ಮಾಡಲು ಟೆಂಡರ್ ಕರೆದು ಆಯ್ಕೆ ಪ್ರಕ್ರಿಯೆಯ ಅಂತಿಮವರೆವಿಗೂ ಸಲಹಾ ಸೇವೆ ಮಾಡಲು ಪ್ರಸ್ತಾವನೆ ಹಾಗೂ ಪ್ರಕ್ರಿಯೆಯನ್ನು ಕೈಗೊಳ್ಳಲು ಹಂತಾವಾರು ಸೇವಾ ಶುಲ್ಕವನ್ನು ತಿಳಿಸಲು TECSOK ಸಂಸ್ಥೆಗೆ ಕೋರಲಾಯಿತು.

4. ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರ ದಿನಾಂಕ:18.12.2021 ರಲ್ಲಿ TECSOK ಸಂಸ್ಥೆಯು ಸಲಹಾ ಸೇವೆಗೆ ಒಪ್ಪಿ, ಸೇವಾ ಶುಲ್ಕದ ವಿವರ ಈ ಕೆಳಕಂಡಂತೆ ತಿಳಿಸಿರುತ್ತಾರೆ;

Professional fee at Rs. 4,20,000+ GST@ 18% totaling to Rs. 4,95,600/-(Rupees Four lakhs ninety five thousands six hundred only).

- 60%(Rs.2.52 lakhs+GST) along with Work Order.
- Balance 40%(Rs.1.68 lakhs+GST) on submission of Empanelment Management Report.

5. ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ TECSOK ಸಂಸ್ಥೆಯ ಪ್ರಸ್ತಾವನೆಗೆ ಅನುಮೋದಿಸಿ ಸೇವೆಯ ಆದೇಶ (work order) ನೀಡಲಾಗಿದೆ.

6. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸೇವಾ ಮುಂಗಡ ಮೊತ್ತ ಬಿಡುಗಡೆಗೆ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 120 ಐಟಿಎಸ್ 2021,**
**ಬೆಂಗಳೂರು, ದಿನಾಂಕ: 29.12.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ, TECSOK ಸಂಸ್ಥೆಗೆ ಸಣ್ಣ ಪಿಪಿಪಿ ಯೋಜನೆಗಳ(ಸಾಮಾಜಿಕ ವಲಯದ ಯೋಜನೆಗಳನ್ನು ಒಳಗೊಂಡಂತೆ) ಅನುಷ್ಠಾನಕ್ಕೆ ಟ್ರಾನ್ಸಾಕ್ಷನ್ ಸಲಹೆಗಾರರ ಪಟ್ಟಿಯನ್ನು ಆಯ್ಕೆ ಮಾಡಿ ತಯಾರಿಸಲು ಮೂಲಸೌಲಭ್ಯ ಅಭಿವೃದ್ಧಿ (ಪಿಪಿಪಿ ಕೋಶ)ಕ್ಕೆ ನೀಡುವ ನೆರವು ಸೇವೆಗೆ ಮುಂಗಡದ ಮೊತ್ತ ರೂ. 2.52 ಲಕ್ಷಗಳು + 18% GST(ರೂ.45,360) ಒಟ್ಟು ಮೊತ್ತ ರೂ.2,97,360/- (ರೂಪಾಯಿ ಎರಡು ಲಕ್ಷದ ತೊಂಬತ್ತೇಳು ಸಾವಿರ ಮುನ್ನೂರ ಅರವತ್ತು ಮಾತ್ರ) ಗಳನ್ನು ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

2. ಈ ಮೊತ್ತವನ್ನು 2021-22ರ ಆರ್ಥಿಕ ಸಾಲಿಗೆ ಲೆಕ್ಕ ಶೀರ್ಷಿಕೆ 3451-00-090-1-06-059-ಪಿಪಿಪಿ ಅಭಿವೃದ್ಧಿ ಕಾರ್ಯಕ್ರಮಗಳು-ಇತರೆ ಖರ್ಚುಗಳು ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

3. ಸದರಿ ಮೊತ್ತವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಮುಖ್ಯ ಸಲಹೆಗಾರರು, ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ (ಟೆಕ್ಸಾಕ್), ಬೆಂಗಳೂರು ಇವರು ಹಣ ಸ್ವೀಕೃತಿ ರಸೀದಿಯ ಮೇಲೆ, ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ಸಹಿ ಪಡೆದು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಇವರಿಂದ ಪಡೆಯಲು ಅನುಮತಿ ನೀಡಲಾಗಿದೆ.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2021, ದಿನಾಂಕ 05.04.2021 ರಡಿಯಲ್ಲಿ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕಲಾವತಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮೂಲಸೌಲಭ್ಯ ಅಭಿವೃದ್ಧಿ, ಬಂದರು
ಮತ್ತು ಒಳನಾಡು ಜಲಸಾರಿಗೆ ಇಲಾಖೆ.

ಗೆ,

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು (ಆ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಮುಖ್ಯ ಸಲಹೆಗಾರರು, ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ (ಟೆಕ್ಸಾಕ್), ಡಿಐಸಿ ಬೆಂಗಳೂರು (ನಗರ) ಕಟ್ಟಡ, ನೆಲ ಮಹಡಿ, 1ನೇ ಕ್ರಾಸ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು – 560 010.
5. ಜಂಟಿ ನಿರ್ದೇಶಕರು, (ಪಿಎಮ್ & ಐ ವಿಭಾಗ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಯೋಜನಾ ನಿರ್ದೇಶಕರು, ಖಜಾನೆ-2, ಗಾಂಧಿನಗರ, ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
8. ಉಪ ನಿರ್ದೇಶಕರು, ಟಿ.ಎನ್.ಎಮ್.ಸಿ, ಖನಿಜ ಭವನ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-1), ವಿಧಾನಸೌದ, ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿ-1, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ.